# ನಿಮ್ಮೊಡನೆ

## ಹಾಸ್ಯ, ವಿಡಂಬನೆ ಬದುಕಿನ ಅಂಗ

ದೈನಂದಿನ ಬದುಕಿನ ಏಕತಾನತೆ ಹಾಗೂ ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರತಿಯೊಬ್ಬರಿಗೂ ಮನರಂಜನೆ ಅತ್ಯಗತ್ಯ. ಕೆಲವು ಸಿನಿಮಾಗಳಲ್ಲಿ ಬಿಡಿ, ಬಿಡಿಯಾದ ಹಾಸ್ಯ ದೃಶ್ಯಗಳಿರುತ್ತವೆ. ಇನ್ನೂ ಕೆಲವು ಸಿನಿಮಾಗಳಲ್ಲಿ ಹಾಸ್ಯದ ಸನ್ನಿವೇಶಗಳನ್ನು ತಂದು ತುರುಕುವ ಪ್ರಯತ್ನವೂ ನಡೆಯುತ್ತದೆ. ಈ ಎಲ್ಲದರ ಹಿಂದಿನ ಕಾಳಜಿ ಜನರನ್ನು ನಗಿಸುವುದೇ ಆಗಿದೆ.

ದೈನಂದಿನ ಬದುಕಿನ ಏಕತಾನತೆ ಹಾಗೂ ಮಾನಸಿಕ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರತಿಯೊಬ್ಬರಿಗೂ ಮನರಂಜನೆ ಅತ್ಯಗತ್ಯ. ಟೀವಿ, ಸಿನಿಮಾ, ನಾಟಕಗಳು ಈ ಕಾಲಘಟ್ಟದ ಪ್ರಮುಖ ಮನರಂಜನೆಯ ಮಾಧ್ಯಮಗಳು. ಸಿನಿಮಾ ಹಾಗೂ ಟೀವಿ ಕಾರ್ಯಕ್ರಮಗಳಲ್ಲಿ ಈಗ ಹಾಸ್ಯಕ್ಕೆ ಹೆಚ್ಚಿನ ಒತ್ತು ಸಿಗುತ್ತಿದೆ. ಸಿನಿಮಾ ಅಥವಾ ಟೀವಿ ಕಾರ್ಯಕ್ರಮಗಳ ಹಾಸ್ಯದ ಸನ್ನಿವೇಶಗಳನ್ನು ಪ್ರತಿಯೊಬ್ಬರೂ ಇಷ್ಟ ಪಡುತ್ತಾರೆ. ಎಷ್ಟೇ ಗಂಭೀರ ಸ್ವಭಾವದ ವ್ಯಕ್ತಿಯೂ ಹಾಸ್ಯಕ್ಕೆ ಸ್ಪಂದಿಸುತ್ತಾನೆ. ಕನ್ನಡ ಹಾಗೂ ಭಾರತೀಯ ಭಾಷಾ ಸಿನಿಮಾಗಳಲ್ಲಿ ಈಗ ಹಾಸ್ಯಕ್ಕೆ ಹೆಚ್ಚಿನ ಒತ್ತು ಸಿಗುತ್ತಿದೆ. ಒಂದು ಸಿನಿಮಾಕ್ಕೆ ಕಥೆ, ನಾಯಕ, ನಾಯಕಿ ಎಷ್ಟು ಮುಖ್ಯವೂ ಹಾಸ್ಯ ಪಾತ್ರಗಳೂ ಅಷ್ಟೇ ಮುಖ್ಯ. ಹಾಸ್ಯ ಪ್ರಧಾನ ಸಿನಿಮಾಗಳಿಗೆ ಅತಿ ಹೆಚ್ಚಿನ ಬೇಡಿಕೆ.

ಇತ್ತೀಚಿನ ದಿನಗಳಲ್ಲಿ ಚಿತ್ರಮಂದಿರಗಳಿಗೆ ಬಂದು ಸಿನಿಮಾ ನೋಡುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆದರೆ ಬಹಳಷ್ಟು ಜನರು ಟೀವಿ ಚಾನಲ್‌ಗಳ ಮೂಲಕ ಸಿನಿಮಾ ನೋಡುತ್ತಾರೆ. ಹಾಸ್ಯ ಸಿನಿಮಾಗಳು ಹಾಗೂ ಸಿನಿಮಾಗಳಲ್ಲಿ ಹಾಸ್ಯ ದೃಶ್ಯಗಳನ್ನು ನೋಡುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಸಿನಿಮಾಗಳ ಹಾಸ್ಯ ದೃಶ್ಯಗಳನ್ನು ಪ್ರಸಾರ ಮಾಡುವ ಚಾನಲ್‌ಗಳಿವೆ. ಇವು ಅತ್ಯಂತ ಜನಪ್ರಿಯ ಚಾನಲ್‌ಗಳು. ಇವುಗಳಲ್ಲಿ ಪ್ರಸಾರವಾಗುವ ಹಾಸ್ಯ ದೃಶ್ಯಗಳು ಚರ್ವಿತಚರ್ವಣ ಅನ್ನಿಸಿದರೂ ಜನರು ಅವುಗಳನ್ನು ಇಷ್ಟಪಟ್ಟು ನೋಡುತ್ತಾರೆ. ಅದೇ ಹಾಸ್ಯಕ್ಕೆ ಇರುವ ಶಕ್ತಿ.

ನಿತ್ಯದ ಬದುಕಿನ ಕಿರಿಕಿರಿಗಳು, ಸಮಸ್ಯೆಗಳು ಹಾಗೂ ದುಃಖ ದುಮ್ಮಾನಗಳನ್ನು ಸಿನಿಮಾ ತೆರೆಯ ಮೇಲೆ ನೋಡಲು ಬಹಳಷ್ಟು ಜನರು ಇಷ್ಟಪಡುವುದಿಲ್ಲ. ಪ್ರತಿಯೊಂದನ್ನೂ ತಮಾಷೆ ಮಾಡುತ್ತ ಬದುಕಿನ ವ್ಯಂಗ್ಯವನ್ನು ಅನಾವರಣಗೊಳಿಸುವ ಹಾಸ್ಯ ಪಾತ್ರಗಳನ್ನು ಜನರು ಇಷ್ಟಪಡುತ್ತಾರೆ. ಗಂಭೀರ ಕಥಾವಸ್ತುವಿರುವ ಸಿನಿಮಾದಲ್ಲೂ ಪ್ರೇಕ್ಷಕರ ಮನರಂಜಿಸಲು ಅಲ್ಲಲ್ಲಿ ಹಾಸ್ಯ ಸನ್ನಿವೇಶಗಳನ್ನು ತರುವ ಪ್ರಯತ್ನ ಪ್ರತಿ ಸಿನಿಮಾದಲ್ಲೂ ನಡೆಯುತ್ತದೆ. ನಾಯಕನ ಗೆಳೆಯ ಅಥವಾ ನಾಯಕಿಯ ಗೆಳತಿಯ ಪಾತ್ರಗಳು ಹಾಸ್ಯ ಪ್ರವೃತ್ತಿಯ ಪಾತ್ರಗಳಾಗಿರುತ್ತವೆ. ಕೆಲವು ಸಿನಿಮಾಗಳಲ್ಲಿ ಬಿಡಿ, ಬಿಡಿಯಾದ ಹಾಸ್ಯ ದೃಶ್ಯಗಳಿರುತ್ತವೆ. ಅವು ಕಥೆಗೆ ಪೂರಕ ಅಲ್ಲದಿದ್ದರೂ ಪ್ರೇಕ್ಷರನ್ನು ರಂಜಿಸುವುದಕ್ಕಾಗಿಯೇ ಸೃಷ್ಟಿಯಾಗಿರುತ್ತವೆ. ಕೆಲ ಸಿನಿಮಾಗಳಲ್ಲಿ ಹಾಸ್ಯದ ಸನ್ನಿವೇಶಗಳನ್ನು ತಂದು ತುರುಕುವ ಪ್ರಯತ್ನ ನಡೆಯುತ್ತದೆ. ಈ ಎಲ್ಲಾ ಪ್ರಯತ್ನಗಳ ಹಿಂದಿನ ಕಾಳಜಿ ಜನರನ್ನು ನಗಿಸುವುದೇ ಆಗಿದೆ.

ನೋಡಲು ವಿಚಿತ್ರವಾಗಿ ಕಾಣುವ ವ್ಯಕ್ತಿಗಳು ಸಿನಿಮಾಗಳ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಲ ಹಿಂದಿತ್ತು. ಕೆಲವು ಹಾಸ್ಯನಟರು ಅಂಗ ಚೇಷ್ಟೆಗಳ (ಕಪಿ ಚೇಷ್ಟೆ)ಮೂಲಕ ಪ್ರೇಕ್ಷಕರನ್ನು ನಗಿಸುವ ಪ್ರಯತ್ನ ಮಾಡುತ್ತಿದ್ದರು. ಪಾತ್ರ ತೆರೆಯ ಮೇಲೆ ಬರುತ್ತಿದ್ದಂತೆ ಪ್ರೇಕ್ಷಕರು ಗೊಳ್ಳೆಂದು ನಗುವ ಕಾಲವೂ ಇತ್ತು. ಮನರಂಜನೆಯ ಮಾಧ್ಯಮಗಳು ಕಡಿಮೆ ಇದ್ದಾಗ ತೀರ ಲಘುವಾದ ಪ್ರಸಂಗಗಳಿಗೆ ಜನರು ಸ್ಪಂದಿಸುತ್ತಿದ್ದರು. ಈಗ ಅವರ ಅಭಿರುಚಿಗಳು ಬದಲಾಗಿವೆ. ಮನರಂಜನೆಯ ಮಾಧ್ಯಮಗಳಲ್ಲಿ ವೈವಿಧ್ಯತೆ ಇದೆ. ಟೀವಿ ಚಾನಲ್‌ಗಳ ಮೂಲಕ ಜಗತ್ತಿನ ಎಲ್ಲಾ ಭಾಷೆಗಳ ಸಿನಿಮಾಗಳನ್ನು ನೋಡುವ ಅವಕಾಶವಿದೆ. ಈಗ ಹಾಸ್ಯದ ಪರಿಕಲ್ಪನೆಯೂ ಬದಲಾಗಿದೆ. ಗಂಭೀರ ಸ್ವರೂಪದ ಹಾಸ್ಯಕ್ಕೆ ಸ್ಪಂದಿಸುವ ಒಂದು ಪ್ರೇಕ್ಷಕ ವರ್ಗವೇ ನಿರ್ಮಾಣಗೊಂಡಿದೆ.

ಬಹುತೇಕ ಸಿನಿಮಾಗಳಲ್ಲಿ ಹಾಸ್ಯಕ್ಕಾಗಿ ಪಾತ್ರಗಳನ್ನು ಸೃಷ್ಟಿಸುವ ಪ್ರಯತ್ನಗಳು ಇಂದಿಗೂ ನಡೆಯುತ್ತಲೇ ಇದ್ದರೂ ಹಾಸ್ಯ ಪಾತ್ರಗಳ ಮೂಲಕವೇ ಬದುಕಿನ ಕಟುವಾಸ್ತವವನ್ನೂ, ಗಂಭೀರ ಸಮಸ್ಯೆಗಳನ್ನು ಹೇಳುವ ಪ್ರಯತ್ನ ನಡೆಯುತ್ತಿವೆ. ಇದು ಒಳ್ಳೆಯ ಬೆಳವಣಿಗೆ. ಕನ್ನಡವೂ ಸೇರಿದಂತೆ ತೆಲುಗು, ತಮಿಳು, ಮಲಯಾಳಂ ಚಿತ್ರರಂಗದಲ್ಲಿ ಅತ್ಯಂತ ಪ್ರತಿಭಾವಂತ ಹಾಸ್ಯ ನಟರಿದ್ದಾರೆ. ನಾಯಕ, ನಾಯಕರಿಗೆ ಇರುವಷ್ಟೇ ಬೇಡಿಕೆ ಮತ್ತು ಜನಪ್ರಿಯತೆ ಅವರಿಗಿದೆ. ಸುಮಾರು ಒಂದೂವರೆ ಸಾವಿರಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಹಾಸ್ಯನಟರನ್ನು ಮತ್ತೆ, ಮತ್ತೆ ಸಿನಿಮಾಗಳಲ್ಲಿ ನೋಡಲು ಬಯಸುವ ಒಂದು ಪ್ರೇಕ್ಷಕ ವರ್ಗವೇ ಇದೆ. ಹಾಸ್ಯಕ್ಕೆ ಜನರು ಮುಕ್ತವಾಗಿ ಸ್ಪಂದಿಸುತ್ತಾರೆ ಎಂಬುದಕ್ಕೆ ಇದು ಉದಾಹರಣೆ. ಕನ್ನಡ ಚಿತ್ರರಂಗಕ್ಕೆ ಪ್ರತಿಭಾವಂತ ಹಾಸ್ಯ ನಟರು ಬರುತ್ತಿದ್ದಾರೆ. ಪೋಷಕ ನಟರು ಹಾಸ್ಯ ನಟರಾಗಿ ಜನಪ್ರಿಯರಾಗುತ್ತಿದ್ದಾರೆ. ಹಾಸ್ಯ, ವಿಡಂಬನೆ ಬದುಕಿನ ಅವಿಭಾಜ್ಯ ಎನ್ನುವಂತಾಗಿದೆ.



■ ಪ್ರೇಮಕುಮಾರ್ ಹರಿಯಬ್ಬೆ